ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು

ಸೆಷನ್ಸ್ ಕೇಸ್ ನಂಬ್ರ 34/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಮಹಮ್ಮದ್ | ಪ್ರಾಸಾಃ 28 |
| ತಂದೆಯ ಹೆಸರು | : | ಶೇಖಬ್ಬ ಬ್ಯಾರಿ | ಚಾಸಾಃ 36 |
| ಪ್ರಾಯ | : | 64 ವರ್ಷ | ದಿನಾಂಕಃ 18.01.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಗುಜರಿ ವ್ಯಾಪಾರ | |
| ವಾಸಸ್ಥಳ | | ಕುದ್ರೆಗುಂಡಿ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಕುದ್ರೆಗುಂಡಿಯ ಗೌರಿಹಳ್ಳದಲ್ಲಿ ವಾಸವಾಗಿದ್ದೇನೆ . ಅಲ್ಲಿಂದ ವಿಟ್ಲಮಕ್ಕಿಗೆ 1 ಕಿಮೀ ದೂರ ಇರುತ್ತದೆ . ನನಗೆ ಮೂಲ ಪ್ರಕರಣದ ಆರೋಪಿ ಅಹಮ್ಮದ್ ಬಾವಾ ಗೊತ್ತು. ಅವರು ನನಗೆ ಕಟ್ಟಡದ ಕೆಲಸವನ್ನು ಫಕೀರ ಅಹಮ್ಮದ್ ಎಂಬವರ ಜಾಗದಲ್ಲಿ ಕಟ್ಟಲು ಕೊಟ್ಟಿದ್ದರು. ಅದೇ ರೀತಿ ನಾನು ಕಟ್ಟಡದ ಕೆಲಸವನ್ನು ಅವರು ಹಣ ಕೊಟ್ಟ ಹಾಗೇ ಮಾಡಿರುತ್ತೇನೆ.

2. ನನಗೆ ಮನೆಯನ್ನು ಯಾನ ಆಕಾರದಲ್ಲಿ ಕಟ್ಟಬೇಕೆಂದು ಯಾರು ಹೇಳಿರುವುದಿಲ್ಲ. ಅಲ್ಲಿ ನಾನಲ್ಲದೇ ಅಬೂಬಕ್ಕರ್ ಮತ್ತು ಇತರರು ಕೆಲಸ ಮಾಡಿರುತ್ತಾರೆ. ನನಗೆ ಹಣವನ್ನು ಸರಿಯಾಗಿ ಪಾವತಿ ಮಾಡದೇ ಇದುದ್ದರಿಂದ ಕೆಲಸವನ್ನು ಬಿಟ್ಟು ಬಿಟ್ಟು ಮಾಡಿದ್ದು ಯಾರು ಸಿಗುತ್ತಾರೋ ಅವರನ್ನು ಕರೆದುಕೊಂಡು ಕೆಲಸ ಮಾಡಿರುತ್ತೇನೆ. ಗಾರೆ ಕೆಲಸದವರಿಗೆ ರೂ. 150, ಕೂಲಿ ಕೆಲಸದವರಿಗೆ ರೂ. 90 ರಿಂದ 100 ಕೂಲಿ ಹಣವನ್ನು ಕೊಡಲಾಗುತ್ತಿತ್ತು. ಕಟ್ಟಡಕ್ಕೆ ಬೇಕಾಗುವ ಎಲ್ಲಾ

ಸಾಮಾನುಗಳನ್ನು ಕೊಪ್ಪದಿಂದ ಗೂಡ್ಸ್ ಟೆಂಪೋನಲ್ಲಿ ತರಿಸಲಾಗುತ್ತಿತ್ತು. ಆ ರೀತಿ ಸುಮಾರು 7-8 ಬಾರಿ ಸಾಮಾನಗಳನ್ನು ಕೊಪ್ಪದಿಂದ ತರಿಸಲಾಗುತ್ತಿತ್ತು .

3. ನಾನು ಆ ಮನೆಯ ಕಟ್ಟಡದ ಕೆಲಸಕ್ಕೆ ಹೋಗುವಾಗ ಬೇರೆ ಯಾರೂ ಇರಲಿಲ್ಲ . ಕಟ್ಟಡದ ಸುತ್ತಮುತ್ತ ಭತ್ತದ ಗದ್ದೆ ಇತ್ತು . ನಾನು ಮೂಲ ಪ್ರಕರಣದ 2 ನೇ ಆರೋಪಿಯನ್ನು ಯಾವ ಊರಿನವರು ಮತ್ತು ಅಲ್ಲಿ ಯಾಕೆ ಕಟ್ಟಡ ಕಟ್ಟುತ್ತಿದ್ದಾರೆಂದು ವಿಚಾರಿಸಿರುವುದಿಲ್ಲ. ಅವರು ಅಲ್ಲಿಗೆ ಯಾವ ಕಾರಣಕ್ಕಾಗಿ ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿದ್ದಾರಾ ಎಂದರೆ ಜ್ಞಾಪಕ ಇರುವುದಿಲ್ಲ.

**(ಈ ಸಮಯದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಕಂಡು ಬಂದಿದ್ದರಿಂದ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುವುದರಿಂದ ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>

4. ನಾನು ಕಟ್ಟಡ ಕಟ್ಟುತ್ತಿದ್ದ ಜಾಗದಲ್ಲಿದ್ದ ಮನೆಯಲ್ಲಿ ಬಡಾಬ್ಯಾ, ಚೋಟಾಬ್ಯಾ, ಯಾಸಿನ್, ರಫಿಕ್ , ಅಲಿಬ್ಯಾ, ಆತನ ಹೆಂಡತಿ ಮತ್ತು ಅಹಮ್ಮದ್ ಬಾವಾ ಇದ್ದರು . ಯಾಸಿನ್ ನು ತಾನು ಇಂಜಿನಿಯರ್ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ಮೂಸನನ್ನು ಯಾಸಿನ್ ನ ನೆಂಟರು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಆದರೆ ಮೂಸನಿಗೆ ಕನ್ನಡ ಮಾತನಾಡಲು ಬರುತ್ತಿರಲಿಲ್ಲ, ಆತನ ಬಳಿ ಒಂದು ದಿನ ನಾನು ನಿಮ್ಮ ಹೆಸರು ಏನೆಂದು ಕೇಳಿದಾಗ ಆತನು ತನ್ನ ಹೆಸರು ಖಯಾಮುದ್ದೀನ್ ಎಂದು ಹೇಳಿದ್ದ

ಎಂದರೆ ಸರಿಯಲ್ಲ. ಇವರುಗಳಿಗೆ ಬೆಳಿಗ್ಗೆ ಅಹಮ್ಮದ್ ಬಾವಾ ಕರಾಟೆ ಹೇಳಿಕೊಡುತ್ತಿದ್ದ ಎಂದರೆ ಸರಿಯಲ್ಲ. ಹೊರಗಿನಿಂದ ಬಂದವರಿಗೆ ಮನೆಯ ಒಳಗಡೆ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ . ಆಗಾಗ ಬಂದೂಕನ್ನು ಹಿಡಿದುಕೊಂಡು ಕಾಡಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಕೆಲವು ಸಮಯ ಇವರೆಲ್ಲರೂ ಒಟ್ಟಿಗೆ ಕುಳಿತುಕೊಂಡು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಏನೆಂದು ಕೇಳಿದರೆ ಧರ್ಮದ ಬಗ್ಗೆ ಖುರಾನ್ ಬಗ್ಗೆ ಮಾತನಾಡುವುದು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಇವರ ಬಳಿ ಒಂದು ಬೈಕ್ ಹಾಗೂ ಒಂದು ಬಿಳಿಯ ಬಣ್ಣದ ಕಾರು ಇತ್ತು ಎಂದರೆ ಸರಿಯಲ್ಲ. ಬಡಾಬ್ಯಾ, ಚೋಟಾಬ್ಯಾ, ಈ ಕಾರಿನಲ್ಲಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಇವರುಗಳು ಇದ್ದ ಜಮೀನಿನಲ್ಲಿ ಯಾವುದೇ ಬೆಳೆಯನ್ನು ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಇವರ ಬಳಿ ಸಾಕಷ್ಟು ಹಣ ಇರುತ್ತಿತ್ತು ಎಂದರೆ ಸರಿಯಲ್ಲ.

5. ಇವರುಗಳು ಆಗಾಗ ನನಗೆ ಗುಜರಾತ್ನಲ್ಲಿ ಮುಸ್ಲಿಂರಿಗೆ ಹಿಂದುಗಳು ಅನ್ಯಾಯ ಮಾಡಿದ್ದಾರೆ , ಸಾವಿರಾರು ಜನರನ್ನು ಸಾಯಿಸಿದ್ದಾರೆ , ತೊಂದರೆ ಆಗಿದೆ, ನಾವು ಅವರ ಪರವಾಗಿ ಹೋರಾಡಬೇಕು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ ಮತ್ತು ಇಂಡಿಯನ್ ಮುಜಾಹಿದ್ ಎಂಬ ಸಂಘಟನೆಯ ಇಂತವರ ಪರವಾಗಿ ಹೋರಾಡುತ್ತಿದೆ, ನೀವುಗಳು ಎಲ್ಲ ಇಂತಹ ಹೋರಾಟಕ್ಕೆ ಬೆಂಬಲ ಕೊಡಬೇಕು ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಇವರುಗಳು ಪ್ರತೀ ಶುಕ್ರವಾರ ಕುದ್ರೆಗುಂಡಿ ಮಸೀದಿಗೆ ಪ್ರಾರ್ಥನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಇವರು ಕೆಲವು ದಿನ ಬಿಲ್ಲು ಬಾಣ ಹಿಡಿದುಕೊಂಡು ಬಾಣ ಬಿಡುವುದನ್ನು ಸಹಾ ನಾನು ನೋಡಿದ್ದೇನೆ ಎಂದರೆ ಸರಿಯಲ್ಲ.

S. C. 34/2020 PW- 28
Date: 18.01.2024

6. ಅಕ್ಟೋಬರ್ 3 ನೇ ತಾರೀಕಿನಿಂದ ಇವರುಗಳೆಲ್ಲರೂ ಶಿವಮೊಗ್ಗದ ಕಡೆಗೆ ಬಸ್ ಹತ್ತಿ ಹೋದರು ಎಂದರೆ ಸರಿಯಲ್ಲ. ಹೊಗುವಾಗ ಸ್ವಲ್ಪ ಜಮೀನಿನ ಕಡೆಗೆ ನೋಡುವಂತೆ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಮಂಗಳೂರಿನಲ್ಲಿ ಭಯೋತ್ಪಾದಕರನ್ನು ಪೋಲೀಸರು ಬಂಧಿಸಿರುತ್ತಾರೆಂದು ನನಗೆ ತಿಳಿಯಿತು ಎಂದರೆ ಸಾಕ್ಷಿಯು ನನಗೆ ಟಿವಿಯಲ್ಲಿ ನೋಡಿದ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ಈ ಬಗ್ಗೆ ವಿಚಾರಿಸಲು ಮಂಗಳೂರು ಮತ್ತು ಬೆಂಗಳೂರು ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ.

ಈಗ ನನಗೆ ಓದಿ ಹೇಳಿದಂತೆ " ನಾನು **ಮನೆಯಲ್ಲಿ ..... .... ...... .**ಸಾಕಷ್ಟು ಹಣ ಇರುತ್ತಿತ್ತು." ಎಂದು ನಿಶಾನೆ ಪಿ-43 ರಂತೆ ಮತ್ತು "ಹೋಗುವಾಗ ... ... ... ನನಗೆ ಹೇಳಿದ್ದರು." ಎಂದು ನಿಶಾನೆ ಪಿ-43(ಎ)ರ ಪ್ರಕಾರ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿದ್ದರೂ ಸಹಾ ಇಲ್ಲವೆಂದು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ 10 ನೇ ಆರೋಪಿ ಪರ ಶ್ರೀ ಎಸ್.ಆರ್.ಎಫ್. ವಕೀಲರಿಂದಃ</u>

(10 ನೇ ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದಾರೆ.)

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.